# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 148 (247) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 10.12.2024 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತೋಟಗಾರಿಕಾ ಉತ್ಪಾದಕರ ಸಹಕಾರಿ ಮಾರುಕಟ್ಟೆ ಮತ್ತು ಸಂಸ್ಕರಣಾ ಸಂಘ (ಹಾಪ್ ಕಾಮ್ಸ್) ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತೋಟಗಾರಿಕಾ ಉತ್ಪಾದಕರ ಸಹಕಾರಿ ಮಾರುಕಟ್ಟೆ ಮತ್ತು ಸಂಸ್ಕರಣಾ ಸಂಘ (ಹಾಪ್ ಕಾಮ್ಸ್) ಗಳ ಸಂಖ್ಯೆ 26. ಇವುಗಳೆಂದರೆ:-<br>ಬೆಂಗಳೂರು, ಬಾಗಲಕೋಟೆ, ಬೆಳಗಾವಿ, ಬೀದರ್, ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಹಾಸನ, ಕಲ್ಬುರ್ಗಿ, ಕೊಡಗು, ಕೊಪ್ಪಳ, ಮಂಡ್ಯ, ಮೈಸೂರು, ಮಂಗಳೂರು, ರಾಯಚೂರು, ಶಿವಮೊಗ್ಗ, ಶಿರಸಿ, ತುಮಕೂರು, ವಿಜಯಪುರ,ಯಾದಗಿರಿ ಮತ್ತು ವಿಜಯನಗರ. |
| ಆ) | ಕಳೆದ 5 ವರ್ಷಗಳಲ್ಲಿ ಮುಚ್ಚಲ್ಪಟ್ಟ ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು; ಹಾಗೂ ಇದಕ್ಕೆ ಕಾರಣಗಳೇನು; (ಜಿಲ್ಲಾವಾರು ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಮುಚ್ಚಲ್ಪಟ್ಟ ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ 140.<br><br>ಇದಕ್ಕೆ ಕಾರಣಗಳು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಇ) | ಪ್ರಸ್ತುತ ಎಷ್ಟು ಹಾಪ್ ಕಾಮ್ಸ್ ಗಳು ಆರ್ಥಿಕ ನಷ್ಟದಲ್ಲಿವೆ ; ಹಾಪ್ ಕಾಮ್ಸ್‌ನ ಆರ್ಥಿಕ ಪುನಃಶ್ಚೇತನ ಮತ್ತು ಮಾರುಕಟ್ಟೆ ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪ್ರಸ್ತುತ 03 ಹಾಪ್‌ಕಾಮ್ಸ್‌ಗಳು ಆರ್ಥಿಕ ನಷ್ಟದಲ್ಲಿವೆ. ಅವುಗಳೆಂದರೆ ಬೆಂಗಳೂರು, ಮೈಸೂರು ಮತ್ತು ಚಾಮರಾಜನಗರ.<br><br>ಹಾಪ್‌ಕಾಮ್ಸ್‌ನ ಆರ್ಥಿಕ ಪುನಃಶ್ಚೇತನ ಮತ್ತು ಮಾರುಕಟ್ಟೆ ವಿಸ್ತರಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:-<br>1. ಸರ್ಕಾರಿ ಇಲಾಖೆಗಳು ಮತ್ತು ಅಂಗ ಸಂಸ್ಥೆಗಳಿಗೆ ಹಣ್ಣು ಮತ್ತು ತರಕಾರಿಗಳನ್ನು ಜಿಲ್ಲಾ ಹಾಪ್‌ಕಾಮ್ಸ್‌ಗಳ ವತಿಯಿಂದ ಪೂರೈಸಲು ಅನುವಾಗುವಂತೆ ಕೆ.ಟಿ.ಪಿ.ಪಿ. ಕಾಯ್ದೆ 1999 ರ ಕಲಂ 4ಜಿ ಅಡಿಯಲ್ಲಿ ವಿನಾಯಿತಿಯನ್ನು ಜಿಲ್ಲಾ ಹಾಪ್‌ಕಾಮ್ಸ್ ಗಳಿಗೆ ನೀಡಲಾಗಿದ್ದು, ಹಾಪ್‌ಕಾಮ್ಸ್‌ಗಳ ಆರ್ಥಿಕ ಪುನಃಶ್ಚೇತನಕ್ಕೆ ಇದು ಸಹಕಾರಿಯಾಗಲಿದೆ. |

<table>
<tr><td></td><td></td><td>2. ಹಾಲಿ ಇರುವ ಹಾಪ್ ಕಾಮ್ಸ್ ಮಳಿಗೆಗಳು ಹಾಗೂ ಇತರೆ ಅವಶ್ಯ ಮೂಲಭೂತ ಸೌಕರ್ಯಗಳ (ಸಂಗ್ರಹಣಾ ಕೇಂದ್ರ,ಸಂಸ್ಕರಣಾ ಘಟಕ, ಕಿಯೋಸ್ಕ್ ಮಳಿಗೆಗಳು) ನಿರ್ಮಾಣಕ್ಕಾಗಿ ಮತ್ತು ಉನ್ನತೀಕರಣಕ್ಕಾಗಿ ರೂ. 8.00 ಕೋಟಿಗಳಿಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.</td></tr>
<tr><td>(ಈ)</td><td>ಹಾಪ್‌ಕಾಮ್ಸ್‌ಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಈ ಪೈಕಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ಪ್ರಸ್ತುತ ರಾಜ್ಯದಲ್ಲಿರುವ 26 ಹಾಪ್ ಕಾಮ್ಸ್ ಗಳಲ್ಲಿನ ಹುದ್ದೆಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿ - ರುವವರ ಸಂಖ್ಯೆ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>809</td><td>525</td><td>284</td></tr>
</table>
ಜಿಲ್ಲಾವಾರು ವಿವರಗಳನ್ನು ಅನುಬಂಧ -2 ರಲ್ಲಿ ನೀಡಲಾಗಿದೆ.<br>
1. ಅತ್ಯಂತ ಅವಶ್ಯಕತೆ ಇರುವಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ.<br>
2. ಸಂಘದ ಆರ್ಥಿಕ ಹಾಗೂ ವ್ಯವಹಾರದ ಲಾಭಕ್ಕೆ ಅನುಗುಣವಾಗಿ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br>
3. ಹಲವು ಖಾಲಿ ಹುದ್ದೆಗಳ ಭರ್ತಿಗಾಗಿ ಪ್ರಸ್ತಾವನೆಯನ್ನು ಸಹಕಾರ ಇಲಾಖೆಗೆ ಸಲ್ಲಿಸಲಾಗಿರುತ್ತದೆ.</td></tr>
<tr><td>(ಉ)</td><td>ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಕಾಲದಲ್ಲಿ ವೇತನ ಪಾವತಿ ಹಾಗೂ ನಿವೃತ್ತಿ ನಂತರ ಗ್ರಾಚ್ಯುಟಿ (ಉಪದಾನ) ನೀಡದಿರುವುದು ನಿಜವೇ ಹಾಗಿದ್ದಲ್ಲಿ, ಯಾವಾಗ ಪಾವತಿಸಲಾಗುವುದು; (ಪಾವತಿಸಬೇಕಾದ ಮೊತ್ತದ ವಿವರ ಹಾಗೂ ಕಾಲಮಿತಿ ಕುರಿತು ವಿವರ ನೀಡುವುದು)</td><td>ಹಾಪ್‌ಕಾಮ್ಸ್‌ಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಗಳಿಗೆ ಸಕಾಲದಲ್ಲಿ, ವೇತನವನ್ನು ಪಾವತಿಸಲಾಗುತ್ತಿದೆ. ಹಾಪ್ ಕಾಮ್ಸ್ ಬೆಂಗಳೂರು, ಜಿಲ್ಲಾ ಹಾಪ್‌ಕಾಮ್ಸ್ ಮೈಸೂರು, ಚಿಕ್ಕಮಗಳೂರು ಮತ್ತು ಹಾಸನದಲ್ಲಿ ನಿವೃತ್ತ ಸಿಬ್ಬಂದಿಗಳಿಗೆ ಅನುದಾನದ ಕೊರತೆಯಿಂದ ಸಕಾಲದಲ್ಲಿ ನಿವೃತ್ತಿ ನಂತರ ಗ್ರಾಚ್ಯುಟಿ (ಉಪದಾನ) ಪಾವತಿಯಾಗಿರುವುದಿಲ್ಲ. ಹಾಪ್ ಕಾಮ್ಸ್‌ವಾರು ವಿವರ ಕೆಳಕಂಡಂತಿದೆ:-
<table>
<tr><th>ಜಿಲ್ಲಾ ಹಾಪ್ ಕಾಮ್ಸ್</th><th>ಮೊತ್ತದ ವಿವರ (ರೂ. ಲಕ್ಷಗಳಲ್ಲಿ)</th><th>ಕಾಲಮಿತಿ</th></tr>
<tr><td>ಬೆಂಗಳೂರು</td><td>503.00</td><td rowspan="4">ಈ ಬಗ್ಗೆ ಕಾಲಮಿತಿ ನಿಗಧಿಪಡಿಸಿರುವುದಿಲ್ಲ.</td></tr>
<tr><td>ಮೈಸೂರು</td><td>51.67</td></tr>
<tr><td>ಹಾಸನ</td><td>70.90</td></tr>
<tr><td>ಚಿಕ್ಕಮಗಳೂರು</td><td>70.00</td></tr>
</table></td></tr>
</table>

**HORTI 490 HGM 2024**

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

## ಅನುಬಂಧ – 1

### ಕಳೆದ 5 ವರ್ಷಗಳಲ್ಲಿ ಮುಚ್ಚಲ್ಪಟ್ಟ ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಹಾಗೂ ಕಾರಣಗಳು

| ಕ್ರ. ಸಂ. | ಜಿಲ್ಲಾ ಹಾಪ್ ಕಾಮ್ಸ್ | ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ | ಕಾರಣಗಳು |
|---|---|---|---|
| 1 | ಬೆಂಗಳೂರು | 89 | ಸಂಸ್ಥೆಯ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದುತ್ತಿರುವುದರಿಂದ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ. ಬೆಂಗಳೂರಿನ ಪ್ರತಿಷ್ಟಿತ ಮಾಲ್ ಗಳು ಹಾಗೂ ಖಾಸಗಿ ವ್ಯಕ್ತಿಗಳಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುತ್ತದೆ ಮತ್ತು ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ತೆರವುಗೊಳಿಸಲಾಗಿರುತ್ತದೆ. |
| 2 | ಬಾಗಲಕೋಟೆ | 2 | 2<br>ಮಳಿಗೆಗಳುಜನಸಂದಣಿಇರದೇಇರುವಸ್ಥಳದಲ್ಲಿಇರುವ ಕಾರಣಮಳಿಗೆಗಳು ಪ್ರಾರಂಭವಾಗಿರುವುದಿಲ್ಲ. |
| 3 | ಬೆಳಗಾವಿ | 3 | ಎಲ್ಲಾ ಬಗೆಯ ತರಕಾರಿಗಳನ್ನು ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತಿರುವುದರಿಂದ ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ಸಗಟು ಮಾರುಕಟ್ಟೆ ಇದ್ದು, ಸದರಿ ಮಾರುಕಟ್ಟೆಯಿಂದ ಹಾಗೂ ನಗರದ ಸಮೀಪ ಇರುವ ಹಳ್ಳಿಯ ಜನರು ಬೀದಿ ವ್ಯಾಪಾರ ಮಾಡುತ್ತಿರುವುದರಿಂದ ಮಳಿಗೆಗಳನ್ನು ಮುಚ್ಚಲಾಗಿದೆ. |
| 4 | ಬೀದರ್ | 1 | ಶಿಥಿಲಗೊಂಡಿರುತ್ತದೆ. |
| 5 | ಬಳ್ಳಾರಿ | 2 | ಮಳಿಗೆಯಿಂದ ಯಾವುದೇ ಲಾಭಾಂಶ ಇಲ್ಲದೇ ಇರುವುದರಿಂದ ಮುಚ್ಚಲಾಗಿರುತ್ತದೆ. |
| 6 | ಚಾಮರಾಜನಗರ | 0 | - |
| 7 | ಚಿತ್ರದುರ್ಗ | 4 | ಜನಸಂದಣಿ ಇಲ್ಲದ ಸ್ಥಳದಲ್ಲಿ ಮಳಿಗೆ ಇರುವುದರಿಂದ |
| 8 | ಚಿಕ್ಕಮಗಳೂರು | 0 | - |
| 9 | ದಾವಣಗೆರೆ | 0 | - |
| 10 | ಧಾರವಾಡ | 6 | ಕಲಘಟಗಿಯಮಳಿಗೆಗೆ ಸಂಬಂಧಿಸಿದಂತೆ ಪ್ರಕರಣವುನ್ಯಾಯಾಲಯದಲ್ಲಿರುವುದರಿಂದ ಮುಚ್ಚಲಾಗಿದೆ.<br>ಜನವಸತಿಕಡಿಮೆಇರುವಕಾರಣದಿಂದನಾಲ್ಕುಮಳಿಗೆಗಳು ಚಾಲ್ತಿಯಲ್ಲಿರುವುದಿಲ್ಲ ಹಾಗೂ ಒಂದು ಮಳಿಗೆಯನ್ನು ಕೆಡವಲಾಗಿದೆ. |
| 11 | ಗದಗ | 0 | - |
| 12 | ಹಾವೇರಿ | 0 | - |
| 13 | ಹಾಸನ | 3 | ರಸ್ತೆ ಅಗಲೀಕರಣದಿಂದ ಮಳಿಗೆಗಳು ತೆರವಾಗಿವೆ. |

| | | | |
|---|---|---|---|
| 14 | ಕಲ್ಬುರ್ಗಿ | 1 | ಮಳಿಗೆಯಿಂದ ಯಾವುದೇ ಲಾಭಾಂಶ ಇಲ್ಲದೇ ಇರುವುದರಿಂದ ಮುಚ್ಚಲಾಗಿರುತ್ತದೆ. |
| 15 | ಕೊಡಗು | 0 | - |
| 16 | ಕೊಪ್ಪಳ | 0 | - |
| 17 | ಮಂಡ್ಯ | 9 | ರಸ್ತೆ ಅಗಲೀಕರಣ ಹಾಗೂ ವ್ಯಾಪಾರ ವಹಿವಾಟು ಕುಂಠಿತವಾಗಿರುವುದರಿಂದ ಮಳಿಗೆ ಮುಚ್ಚಲಾಗಿದೆ. |
| 18 | ಮೈಸೂರು | 8 | ಸದರಿ ಮಳಿಗೆಗಳಲ್ಲಿ ವ್ಯಾಪಾರ ನಷ್ಟದ ಕಾರಣದಿಂದ |
| 19 | ಮಂಗಳೂರು | 2 | ರಸ್ತೆಅಗಲೀಕರಣದಿಂದ 1 ಹಾಗೂಮಂಗಳೂರುಸ್ಮಾರ್ಟ್ ಸಿಟಿವಿಸ್ತರಣೆಯೋಜನೆಯಿಂದ 1 |
| 20 | ರಾಯಚೂರು | 0 | - |
| 21 | ಶಿವಮೊಗ್ಗ | 1 | ಎಂಪಿಎಂಫ್ಯಾಕ್ಟರಿಲಾಕ್ಡೌನ್ ನಿಂದಾಗಿ ಮಳಿಗೆ ಮುಚ್ಚಲಾಗಿದೆ. |
| 22 | ಶಿರಸಿ | 1 | ತೋಟಗಾರಿಕೆ ಇಲಾಖೆ ಅಂಕೋಲ ಕಟ್ಟಡ ನಿರ್ಮಾಣದಿಂದಾಗಿ ತೆರವುಗೊಳಿಸಲಾಗಿದೆ. |
| 23 | ತುಮಕೂರು | 2 | ಸ್ಮಾರ್ಟ್ ಸಿಟಿ ಕಾಮಗಾರಿ ಪ್ರಯುಕ್ತ |
| 24 | ವಿಜಯಪುರ | 6 | ವಿವಿಧ ಬಡಾವಣೆಗಳಲ್ಲಿ ತರಕಾರಿ ಮಾರುಕಟ್ಟೆಗಳು ಪ್ರಾರಂಭವಾಗಿರುವುದರಿಂದ ಹಣ್ಣು ಮತ್ತು ತರಕಾರಿಗಳ ಬೇಡಿಕೆ ಕಡಿಮೆ ಆಗಿದ್ದು ಮಾರಾಟ ಮಳಿಗೆಗಳು ಮುಚ್ಚಲಾಗಿದೆ. |
| 25 | ಯಾದಗಿರಿ | 0 | ಹೊಸದಾಗಿ ಸ್ಥಾಪನೆಯಾಗಿರುವ ಹಾಪ್ ಕಾಮ್ಸ್ ಗಳಾಗಿರುತ್ತವೆ. |
| 26 | ವಿಜಯನಗರ | 0 | |
| | ಒಟ್ಟು | 140 | |

## ಅನುಬಂಧ – 2

## ಹಾಪ್ ಕಾಮ್ಸ್ ಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಈ ಪೈಕಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಖಾಲಿ ಹುದ್ದೆಗಳ ಭರ್ತಿಗೆ ಕೈಗೊಂಡ ಕ್ರಮ

| ಕ್ರ. ಸಂ. | ಜಿಲ್ಲಾ ಹಾಪ್ ಕಾಮ್ಸ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿ - ರುವವರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂಧಿಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು | 619 | 399+4 (ಇಲಾಖೆಯ ಎರವಲು ಸೇವೆ) | 216 | - |
| 2 | ಬಾಗಲಕೋಟೆ | 0 | 0 | 0 | - |
| 3 | ಬೆಳಗಾವಿ | 3 | 3 | 0 | - |
| 4 | ಬೀದರ್ | 0 | 0 | 0 | 2 |
| 5 | ಬಳ್ಳಾರಿ | 0 | 0 | 0 | 1 |
| 6 | ಚಾಮರಾಜ ನಗರ | 0 | 0 | 0 | 2 |
| 7 | ಚಿತ್ರದುರ್ಗ | 0 | 0 | 0 | 3 |
| 8 | ಚಿಕ್ಕಮಗಳೂರು | 7 (ಬೆಂಗಳೂರು ಹಾಪ್ ಕಾಮ್ಸ್ ನಿಂದ ಸ್ಥಳಾಂತರಗೊಂಡಿರುವ ಹುದ್ದೆಗಳು) | 1 | 6 (ನಿವೃತ್ತಿ, ರಾಜಿನಾಮೆ, ಗೈರು ಹಾಜರಿ) | - |
| 9 | ದಾವಣಗೆರೆ | 0 | 0 | 0 | 20 |
| 10 | ಧಾರವಾಡ | 0 | 0 | 0 | - |
| 11 | ಗದಗ | 0 | 0 | 0 | - |
| 12 | ಹಾವೇರಿ | 0 | 0 | 0 | - |
| 13 | ಹಾಸನ | 15 (ಬೆಂಗಳೂರು ಹಾಪ್ ಕಾಮ್ಸ್ ನಿಂದ ಸ್ಥಳಾಂತರಗೊಂಡಿರುವ ಹುದ್ದೆಗಳು) | 9 | 6 | - |
| 14 | ಕಲ್ಬುರ್ಗಿ | 0 | 0 | 0 | 1 |
| 15 | ಕೊಡಗು | 6 | 1 | 5 | 13 |

| | | | | | |
|---|---|---|---|---|---|
| 16 | ಕೊಪ್ಪಳ | 0 | 0 | 0 | - |
| 17 | ಮಂಡ್ಯ | 4 ಖಾಯಂ (ಬೆಂಗಳೂರಿನಿಂದ ಸ್ಥಳಾಂತರಗೊಂಡಿದ್ದು) + 20 ದಿನಗೂಲಿ ನೌಕರರು | 4 (ಬೆಂಗಳೂರಿನಿಂದ ಸ್ಥಳಾಂತರಗೊಂಡಿದ್ದು) +20 ದಿನಗೂಲಿ ನೌಕರರು | 0 | - |
| 18 | ಮೈಸೂರು | 97 | 53 | 44 | - |
| 19 | ಮಂಗಳೂರು | 18 | 18 | 0 | - |
| 20 | ರಾಯಚೂರು | 0 | 0 | - | 1 |
| 21 | ಶಿವಮೊಗ್ಗ | 4 | 1 | 3 | |
| 22 | ಶಿರಸಿ | 7 | 7 | 0 | - |
| 23 | ತುಮಕೂರು | 6 | 4 | 2 | - |
| 24 | ವಿಜಯಪುರ | 3 | 1 | 2 | - |
| 25 | ಯಾದಗಿರಿ | 0 | 0 | 0 | - |
| 26 | ವಿಜಯನಗರ | 0 | 0 | 0 | - |
| | ಒಟ್ಟು | 809 | 525 | 284 | 43 |